ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ
ನ್ಯಾಯಿಕ ದಂಡಾಧಿಕಾರಿ, ಪುತ್ತೂರು, ದ.ಕ. ಇವರ ನ್ಯಾಯಾಲಯದಲ್ಲಿ

O.S. :336/2016
D.W :2

ಸಾಕ್ಷಿಯ ಹೆಸರು :ಐ ನಾರಾಯಣ ಗೌಡ
ತಂದೆಯ ಹೆಸರು :ಪರಮೇಶ್ವರ ಗೌಡ
ವಯಸ್ಸು :85 ವರ್ಷ
ಉದ್ಯೋಗ :ಕೃಷಿ
ವಾಸ್ತವ್ಯ :ಕೆದಂಬಾಡಿ ಗ್ರಾಮ

ದಿನಾಂಕಃ 02-09-2023 ಸಾಕ್ಷಿಯನ್ನು ಈ ದಿನ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪ್ರತಿವಾದಿಯ ಸಾಕ್ಷ್ಯ ವಿಚಾರಣೆಃ ಶ್ರೀ. ಕೆ.ಎನ್.ಎಸ್ ವಕೀಲರಿಂದಃ

ಸಾಕ್ಷಿಯು ತನ್ನ ಮುಖ್ಯ ವಿಚಾರಣೆಯ ಸಾಕ್ಷ್ಯದ ಹೇಳಿಕೆಯನ್ನು ಪ್ರಮಾಣ ಪತ್ರದ ಮುಖೇನ ಸಲ್ಲಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿ ಅವುಗಳಲ್ಲಿ ಇರುವ ಅಂಶಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣೀಕರಿಸುತ್ತಾರೆ.

ನಿ.ಡಿ.12 ರಲ್ಲಿರುವ ಸಹಿಯು ನನ್ನದೇ ಆಗಿರುತ್ತದೆ . ಸದರಿ ಸಹಿಯನ್ನು ನಿ.ಡಿ.12 (ಸಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು 1990 ನೇ ಸಾಲಿನಲ್ಲಿ ಕೆ. ನಾರಾಯಣ ಭಟ್ ರವರ ಕಚೇರಿ ಯಲ್ಲಿ ಹಾಕಿರುತ್ತೇನೆ. ಅವರು ಈಗ ತೀರಿಹೋಗಿರುತ್ತಾರೆ. ಸಾಕ್ಷಿಗೆ ನಿ.ಡಿ.12 ರ ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ಕುಕ್ಕಪ್ಪ ಗೌಡ ಮತ್ತು ಕಾಶ್ಮೀರಿ ಡಿ ಸೋಜಾರವರ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಸಹಿಗಳನ್ನು ಈಗಾಗಲೇ ನ್ಯಾಯಾಲಯದಲ್ಲಿ ನಿ.ಡಿ.12(ಎ) ಮತ್ತು ನಿ.ಡಿ.12(ಬಿ) ಎಂದು ಗುರುತಿಸಲಾಗಿರುತ್ತದೆ. ಸದರಿ ನಿ.ಡಿ.12 ರಲ್ಲಿ ಇನ್ನೊಬ್ಬ ಸಾಕ್ಷಿದಾರರಾದ ಶಿವಪ್ಪ ಎಂಬುವವರು ಸಹಿ ಇರುವುದನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿ.ಡಿ.12(ಡಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಪತ್ರ ಬರಹಗಾರರಾದ ನಾರಾಯಣ ಭಟ್ ವಕೀಲರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಡಿ.12(ಇ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ನಿ.ಡಿ.8 ರ ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ಕಾಶ್ಮೀರಿ ಡಿ ಸೋಜಾರವರ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಸಹಿಗಳನ್ನು ಈಗಾಗಲೇ ನ್ಯಾಯಾಲಯದಲ್ಲಿ ನಿ.ಡಿ.8(ಎ) ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ಪತ್ರ ಬರಹಗಾರರಾದ ನಾರಾಯಣ ಭಟ್ ವಕೀಲರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಡಿ.8(ಬಿ ) ಎಂದು ಗುರುತಿಸಲಾಯಿತು. ನಿ.ಡಿ.8 ನ್ನು ದೃಢೀಕರಿಸಿದ ನೋಟರಿ ವಕೀಲರಾದ ಎಂ. ರಾಘವ ರವರ ಸಹಿಯನ್ನು ನೋಡುತ್ತಿದ್ದು ಅದನ್ನು ನಿ.ಡಿ.8(ಸಿ) ಎಂದು ಗುರುತಿಸಲಾಯಿತು. ಸದರಿ ಎಂ.ರಾಘವ ರವರು ಈಗ ತೀರಿಹೋಗಿರುತ್ತಾರೆ. ನಾನು ಈಗ ನಿ.ಡಿ.6 ಸಾಗುವಳಿ ಚೀಟಿಯನ್ನು ನೋಡುತ್ತಿದ್ದು ಸದರಿ ದಾಖಲೆಯನ್ನು ಕರಾರು ಆಗುವ ಸಂದರ್ಭದಲ್ಲಿ ವಾದಿ ಕಾಶ್ಮೀರಿ ಡಿ ಸೋಜಾ ರವರು ಹುಕ್ಕಪ್ಪಗೌಡ ರವರಿಗೆ ನೀಡಿದ ದಾಖಲೆಯಾಗಿರುತ್ತದೆ.

**ಪಾಟೀ ಸವಾಲುಃ ಶ್ರೀ. ಎಸ್ ಎನ್. ಎನ್. ಕೆ. ವಕೀಲರು**

ಈಗ ಪ್ರತಿವಾದಿ ನ್ಯಾಯಾಲಯದಲ್ಲಿಯೇ ಇರುತ್ತಾರೆ ಎಂದರೆ ಸರಿ . ನಾನು ಮತ್ತು ಪ್ರತಿವಾದಿ ಬೆಳಿಗ್ಗೆ 11.00 ಗಂಟೆಗೆ ನ್ಯಾಯಾಲಯದಲ್ಲಿ ಒಟ್ಟಿಗೆ ಕುಳಿತುಕೊಂಡಿರುತ್ತೇವೆ ಎಂದರೆ ಸರಿ. ನನ್ನನ್ನು ಸಾಕ್ಷಿ ಹೇಳಲು ಪ್ರತಿವಾದಿಯೇ ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿ . ಸಾಕ್ಷಿ ಹೇಳಲು ಬರಬೇಕೆಂದು ಪ್ರತಿವಾದಿಯೇ ನನಗೆ ಹೇಳಿರುತ್ತಾರೆ. ಈ ಕೇಸಿನ ವಿಚಾರಗಳನ್ನು ಪ್ರತಿವಾದಿಯೇ ಮಾಹಿತಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು 2 ಪ್ರಮಾಣಪತ್ರಿಕೆಯನ್ನು ನ್ಯಾಯಾಲಯಕ್ಕೆ ಹಾಕಿರುತ್ತೇನೆ. ದಿನಾಂಕ 07-07-2023 ರಂದು ಒಂದು ಪ್ರಮಾಣಪತ್ರಿಕೆಯನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿ . ಸದರಿ ದಾಖಲೆಯನ್ನು ನಿ.ಪಿ.5 ಎಂದು ಗುರುತಿಸಲಾಯಿತು. ನಿ.ಪಿ.5 ರ ಪ್ರಮಾಣಪತ್ರಿಕೆಯನ್ನು ತಯಾರಿಸಲು ನಾನೇ ಮಾಹಿತಿಯನ್ನು ನೀಡಿರುತ್ತೇನೆ. ನಿ.ಪಿ.5 ರ ಪ್ರಮಾಣಪತ್ರಿಕೆಯ ಅಂಶಗಳು ಸತ್ಯವಾಗಿರುತ್ತದೆ. ನನಗೆ ಕನ್ನಡ ಓದಲು ಬರುತ್ತದೆ. ನಿ.ಪಿ.5 ರ 2 ನೇ

ಪ್ಯಾರಾದಲ್ಲಿ ಹೇಳಿರುವಂತೆ ಇದರಲ್ಲಿ ಉಲ್ಲೇಖಿಸಿರುವ ಪವರ್ ಅಫ್ ಅಟಾರ್ನಿಗೆ ನಾನು ಮತ್ತು ಇನ್ನೊಬ್ಬರು ಸಾಕ್ಷಿಯಾಗಿ ಸಹಿ ಮಾಡಿರುತ್ತೇವೆ ಎಂದು ಹೇಳಿರುವ ಅಂಶಗಳು ಸತ್ಯವಾಗಿರುತ್ತದೆ. ದಿನಾಂಕ 29-07-2017 ರಂದು ಒಂದು ಪ್ರಮಾಣಪತ್ರಿಕೆಯನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿ . ಸದರಿ ದಾಖಲೆಯನ್ನು ನಿ.ಪಿ.6 ಎಂದು ಗುರುತಿಸಲಾಯಿತು. ಸದರಿ ನಿ.ಪಿ.6 ರಲ್ಲಿರುವ ಫೋಟೋ ನನ್ನದೇ ಆಗಿರುತ್ತದೆ. ನಿ.ಪಿ.6 ರ ಪ್ರಮಾಣಪತ್ರಿಕೆಯ ಪ್ಯಾರಾ 2 ರಲ್ಲಿ "ದಕ್ಷಿಣ ಕನ್ನಡ ಜಿಲ್ಲೆ ಬಂಟ್ವಾಳ ತಾಲೂಕು --------------- ಒಂದು ಕರಾರು ಮಾಡಿಕೊಂಡಿರುತ್ತಾರೆ" ಎಂದು ಹೇಳಿರುವ ಅಂಶ ನಿಜವಿರುತ್ತದೆ. ಸದರಿ ಭಾಗವನ್ನು ನಿ.ಪಿ.6(ಎ) ಎಂದು ಗುರುತಿಸಲಾಯಿತು. ನಾನು ಕಾಶ್ಮೀರಿ ಡಿ ಸೋಜಾರವರ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ನಿ.ಪಿ.3 ರ ಗುರುತಿನ ಚೀಟಿಯಲ್ಲಿರುವ ಸಹಿಯು ಕಾಶ್ಮೀರಿ ಡಿ ಸೋಜರಾರವರದ್ದೇ ಆಗಿರುತ್ತದೆ. ಸದರಿ ಸಹಿಯನ್ನು ನಿ.ಪಿ.3(ಎ) ಎಂದು ಗುರುತಿಸಲಾಯಿತು. ನಿ.ಪಿ.4 ಕೂಡಾ ಕಾಶ್ಮೀರಿ ಡಿ ಸೋಜಾರವರ ಸಹಿ ಎಂದರೆ ಸರಿ . ಕಾಶ್ಮೀರಿ ಡಿ ಸೋಜಾ ಮತ್ತು ನಾನು ಯಾವುದೇ ಆಸ್ತಿಯ ಸಂಬಂಧವಾಗಿ ಒಟ್ಟಿಗೆ ಒಂದೇ ದಿನಾಂಕದಂದು ಮೋಹನ್ ಭಟ್ ವಕೀಲರ ಕಚೇರಿಗೆ ಹೋಗಿಲ್ಲ ಎಂದರೆ ಸರಿ . ಸಾಕ್ಷಿಯು ಮುಂದುವರಿದು ನಾನು ನಾರಾಯಣ ಭಟ್ ರವರ ಕಚೇರಿಗೆ ಹೋಗಿರುತ್ತೇನೆ ಎಂದು ಹೇಳುತ್ತಾರೆ. ನಾನು ನಾರಾಯಣ ಭಟ್ ಕಚೇರಿಗೆ ಹೋದಾಗ ಅಲ್ಲಿ ಪ್ರತಿವಾದಿಯ ತಂದೆ ಹುಕ್ಕಪ್ಪ ಗೌಡ , ಕಾಶ್ಮೀರಿ ಡಿ ಸೋಜಾ ಮತ್ತು ನಾರಾಯಣ ಭಟ್ ರವರು ಇದ್ದರು. ನನ್ನ ಪ್ರಕಾರ ನಾರಾಯಣ ಭಟ್ ರವರ ಕಚೇರಿಯಲ್ಲಿ ಹುಕ್ಕಪ್ಪ ಗೌಡರು ಕಾಶ್ಮೀರಿ ಡಿ ಸೋಜಾರವರಿಗೆ ಒಟ್ಟು ಎಷ್ಟು ಹಣ ಸಂದಾಯ ಮಾಡಿದರು ಎಂದರೆ ಸಾಕ್ಷಿಯು ಆ ದಿನ 500/-ರೂ.ಗಳನ್ನು ನೀಡಿರುತ್ತಾರೆ ನಂತರ ಅದೇ ತಿಂಗಳಲ್ಲಿ 4,500/- ರೂ.ಗಳನ್ನು ನೀಡಿರುತ್ತಾರೆ ಎಂದು ಹೇಳುತ್ತಾರೆ.. ಸದರಿ 4,500/- ರೂ.ಗಳನ್ನು ನೀಡಿರುವುದಕ್ಕೆ ಯಾವುದೇ ರಶೀದಿ ಅಥವಾ ದಾಖಲೆ ಮಾಡಿಲ್ಲ. ನಾನು ಹೇಳಿದ 4,500/- ರೂ. ಗಳನ್ನು ಯಾವ ದಿನಾಂಕದಂದು ನೀಡಿರುತ್ತಾರೆ ಎಂದು ಈಗ ನನಗೆ ನೆನಪಿಲ್ಲ. ಸದರಿ 4,500/- ರೂ ಗಳನ್ನು ನೀಡುವಾಗ ನಾನು, ಶಿವಪ್ಪ, ಹುಕ್ಕಪ್ಪ ಮತ್ತು ಕಾಶ್ಮೀರಿ ಡಿಸೋಜರವರು ಇದ್ದರು. 3 ನೇ ಸಲ ಹಣ ನೀಡುವಾಗ ನಾನು ಹುಕ್ಕಪ ಮತ್ತು ಕಾಶ್ಮೀರಿ ಡಿ

ಸೋಜರವರು ಇದ್ದೇವು. 3 ನೇ ಸಲ ಹಣ ನೀಡುವಾಗ ಮೋಹನ್ ಭಟ್ ರವರ ಕಚೇರಿಗೆ ಬರಲು ಹೇಳಿದರು. ಮೋಹನ್ ಭಟ್ ರವರ ಕಚೇರಿಯ ವಿಚಾರವನ್ನು ನಿ.ಪಿ.5 ಮತ್ತು 6 ರ ಪ್ರಮಾಣಪತ್ರಿಕೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮೋಹನ್ ಭಟ್‌ರವರ ಕಚೇರಿಗೆ ಯಾವ ದಿನಾಂಕದಂದು ಹೋಗಿದ್ದೇನೆ ಎಂದು ನನಗೆ ನೆನಪಿಲ್ಲ. ನಾನು ಮೋಹನ್ ಭಟ್ ವಕೀಲರ ಕಚೇರಿಗೆ ಎಷ್ಟು ವರ್ಷಗಳ ಹಿಂದೆ ಹೋಗಿರುತ್ತೇನೆ ಎಂದು ಹೇಳಲು ಸಾಧ್ಯವಿಲ್ಲ ಎಂದರೆ ಸಾಕ್ಷಿಯು 2006 ನೇ ಸಾಲಿನಲ್ಲಿ ಹೋಗಿರುತ್ತೇನೆ ಎಂದು ಹೇಳುತ್ತಾರೆ. ಮೋಹನ್ ಭಟ್ ರವರ ಕಚೇರಿಯಲ್ಲಿ ಹಣ ಪಾವತಿ ಮಾಡಿದ ಮಟ್ಟಗೆ ರಶೀದಿ ಅಥವಾ ದಾಖಲೆಯನ್ನು ಮಾಡಿಲ್ಲ. ನಾರಾಯಣ ಭಟ್ ರವರ ಕಚೇರಿಗಾಗಲೀ ಅಥವಾ ಮೋಹನ್ ಭಟ್ ರವರ ಕಚೇರಿಗಾಗಲೀ ಕಾಶ್ಮೀರಿ ಡಿ ಸೋಜಾರವರು ಯಾವತ್ತೂ ಬಂದೇ ಇಲ್ಲ ಎಂದರೆ ಸರಿಯಲ್ಲ. ನಿ.ಡಿ.8(ಎ) ಮತ್ತು ನಿ.ಡಿ.12(ಬಿ) ಕಾಶ್ಮೀರಿ ಡಿಸೋಜಾರವರ ಸಹಿ ಅಲ್ಲ ಎಂದರೆ ಸರಿಯಲ್ಲ. ನನಗೆ ವೈಯಕ್ತಿಕವಾಗಿ ಕಾಶ್ಮೀರಿ ಡಿ ಸೋಜಾರವರ ಪರಿಚಯ ಇಲ್ಲ ಎಂದರೆ ಸರಿಯಲ್ಲ. ಬೇರೆ ಯಾವುದೇ ವ್ಯಕ್ತಿಯನ್ನು ಕಾಶ್ಮೀರಿ ಡಿ ಸೋಜಾ ಎಂದು ಬಿಂಬಿಸಿ ನಿ.ಡಿ.8 ಮತ್ತು 12 ಕ್ಕೆ ಸೃಷ್ಟಿಸಿಕೊಂಡು ಕಾಶ್ಮೀರಿ ಡಿ ಸೋಜಾರವರ ಸಹಿ ಎಂದು ಸಾಧಿಸಿರುತ್ತೇವೆ ಎಂದರೆ ಸರಿಯಲ್ಲ. ನಿ.ಡಿ.8 ತಯಾರು ಮಾಡಲು ಸ್ಟಾಂಪ್ ಪೇಪರ್ ನ್ನು ನಾರಾಯಣ ಭಟ್ ವಕೀಲರು ತಂದಿರುತ್ತಾರೆ. ನಿ.ಡಿ.8 ತಯಾರು ಮಾಡಲು ಮಾಹಿತಿಯನ್ನು ಹುಕ್ಕಪ್ಪ ಗೌಡ ಮತ್ತು ಕಾಶ್ಮೀರಿ ಡಿ ಸೋಜಾರವರು ನೀಡಿರುತ್ತಾರೆ. ನನ್ನ ಪ್ರಕಾರ ಮೊದಲು ಕರಾರು ಆಗಿರುತ್ತದೆ ನಂತರ ಅದೇ ದಿನ ಸಾಮಾನ್ಯ ಅಧಿಕಾರ ಪತ್ರ ಆಗಿರುತ್ತದೆ. . ನನ್ನ ಪ್ರಕಾರ ನಾರಾಯಣ ಭಟ್ ರವರ ಕಚೇರಿಯಲ್ಲಿ ನಿ.ಡಿ.12 ರಂತೆ ಪೂರ್ತಿಯಾಗಲು ಎಷ್ಟು ಸಮಯ ಆಗಿರುತ್ತದೆ ಎಂದು ನನಗೆ ನೆನಪಿಲ್ಲ.

ನಾರಾಯಣ ಭಟ್ ವಕೀಲರ ಕಚೇರಿಯಲ್ಲಿ ಕರಾರಿನ ಕರಡು ಪ್ರತಿಯನ್ನು ತೆಗೆದಿದ್ದಾರಾ ಎಂದರೆ ನನಗೆ ಗೊತ್ತಿಲ್ಲ. ನಾರಾಯಣ ಭಟ್ ವಕೀಲರ ಕಚೇರಿಯಲ್ಲಿ ಅಧಿಕಾರ ಪತ್ರದ ಕರಡು ಪ್ರತಿಯನ್ನು ತೆಗೆದಿದ್ದಾರಾ ಎಂದರೆ ಮಾಡಿರುತ್ತಾರೆ ಎಂದು ಹೇಳುತ್ತಾರೆ. ನಿ.ಡಿ.8 ರ ದಾಖಲೆಯಲ್ಲಿ ನನ್ನ

ಸಹಿ ಕಾಣುವುದಿಲ್ಲ. ನಾನು ಹೇಳಿದ ನಿ.ಡಿ.8 ರಲ್ಲಿ ಇನ್ನೊಬ್ಬರ ಸಾಕ್ಷಿಯ ಸಹಿ ಕಾಣುವುದಿಲ್ಲ ಎಂದರೆ ಸರಿ . ನನ್ನ ಮತ್ತು ಹುಕ್ಕಪ್ಪ ಗೌಡ ರ ಮಧ್ಯೆ ಒಳ್ಳೆ ಬಾಂದವ್ಯ ಇದೆ ಎಂದರೆ ನೆರೆಕರೆಯವರು ಬಾಂದವ್ಯ ಇರುತ್ತದೆ. ಕಾಶ್ಮೀರಿ ಡಿ ಸೋಜಾರವರು ಭೂಮಿಯನ್ನು ಕಬಳಿಸುವ ಉದ್ದೇಶದಿಂದ ಹುಕ್ಕಪ್ಪ ಗೌಡರು ಸೃಷ್ಟಿಸಿದ ಸುಳ್ಳು ದಾಖಲೆಗಳಿಗೆ ನಾನು ಹುಕ್ಕಪ್ಪಗೌಡ ರ ಜೊತೆ ಶಾಮೀಲಾಗಿದ್ದೇನೆ ಎಂದರೆ ಸರಿಯಲ್ಲ. ನಿ.ಡಿ.8 ಮತ್ತು 12 ನ್ನು ಯಾವತ್ತೂ ಕೂಡಾ ಕಾಶ್ಮೀರಿ ಡಿ ಸೋಜಾರವರು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ಹುಕ್ಕಪ್ಪ ಗೌಡರು ಅವರ ಮಗ ಪ್ರತಿವಾದಿಗೆ ಯಾವುದಾದರೂ ದಾಖಲೆ ಮಾಡಿದ್ದಾರಾ ಎಂದರೆ ಸಾಕ್ಷಿಯು 2006 ರಲ್ಲಿ ಕ್ರಯಪತ್ರ ಮಾಡಿದ್ದಾರೆ ಎಂದು ಹೇಳುತ್ತಾರೆ. . ಈ ದಾವೆಯ ಜಮೀನನ್ನೇ 2006 ರಲ್ಲಿ ಕ್ರಯಪತ್ರ ವನ್ನು ಮಾಡಿರುತ್ತಾರೆ. . ಸದರಿ ಕ್ರಯಪತ್ರ ಮಾಡುವಾಗ ನಾನು ಇರಲಿಲ್ಲ. ಸದರಿ ಕ್ರಯ ಪತ್ರ ನೋಂದಾವಣಿ ಆಗಿದೆಯಾ ಎಂದರೆ ಸಾಕ್ಷಿಯು ಆಗಿದೆ ಎಂದು ಹೇಳುತ್ತಿದ್ದರು . ಹುಕ್ಕಪ್ಪ ಗೌಡರಾಗಲೀ ಅಥವಾ ಪ್ರತಿವಾದಿಯೇ ಆಗಲಿ ಯಾವತ್ತೂ ಕೂಡಾ ಕಾಶ್ಮೀರಿ ಡಿ ಸೋಜಾರವರಿಗೆ ಪ್ರತಿಫಲದ ಹಣ ನೀಡಲ್ಲ ಎಂದರೆ ಸರಿಯಲ್ಲ. ನಾನು ಹುಕ್ಕಪ್ಪ ಗೌಡರಿಗಾಗಲೀ ಅಥವಾ ಪ್ರತಿವಾದಿಗಾಗಲೀ ಲಾಭವಾಗಲಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನೋಟರಿ ರಾಘವ ರವರ ಕಚೇರಿಗೆ ಸಹ ಕಾಶ್ಮೀರಿ ಡಿ ಸೋಜಾರವರು ಹೋಗಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ.

ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ, ಹೇಳಿ, ಕೇಳಿ, ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ
ದರ್ಜೆ ನ್ಯಾಯಿಕ ದಂಡಾಧಿಕಾರಿ, ಪುತ್ತೂರು, ದ.ಕ.